**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂ: 450/2015

ಸಿಡಬ್ಲೂ 7 ಪಿಡಬ್ಲೂ 04

| | | |
|---|---|---|
| ಸಾಕ್ಷಿದಾರರ ಹೆಸರು | ಚಂದ್ರಶೇಖರ ಸಾರವಾಡ | |
| ತಂದೆ ಹೆಸರು | ಬಸವಂತಪ್ಪ | |
| ವಯಸ್ಸು | 64 | ವರ್ಷ |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಕವಲಗಿ | |

**<u>ಸಾಕ್ಷಿಯನ್ನು ಇಂದು ದಿನಾಂಕಃ 05.05.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ</u>**

1. ಚಾಸಾ-1,4 ರಿಂದ 6 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ನನಗೆ ಈ ಪ್ರಕಣರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 4 ರವರೊಂದಿಗೆ ಗಲಾಟೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೇದರಿಕೆ ಹಾಕಿರುವುದಿಲ್ಲ. ಅದೇ ರೀತಿಯಾಗಿ ಆರೋಪಿತರು ಚಾಸಾ-1 ಮತ್ತು 4 ರವರಿಗೆ ಕೈಯಿಂದ ಮತ್ತು ಯಾವುದೇ ವಸ್ತುವಿನಿಂದ ಹಲ್ಲೇ ಮಾಡಿರುವುದಿಲ್ಲ. ನಾನು ಪೋಲಿಸರು ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ

1. ಆರೋಪಿತರು ಮತ್ತು ಚಾಸಾ-1 ರವರ ಮಧ್ಯ ಒಂದು ಜಾಗೆಯ ಕುರಿತು ಸಿವಿಲ್ ದಾವೆ ಚಾಲ್ತಿಯಲ್ಲಿದ್ದು, ಸದರಿ ಪ್ರಕರಣದ ಸಿಟ್ಟಿನಿಂದ ದಿಃ 16.12.2014 ರಂದು ಸಂಜೆ 06.30 ಗಂಟೆಗೆ ಕವಲಗಿ ಗ್ರಾಮದ ಚಾಸಾ-1 ರವರ ಮನೆಯ ಮುಂದಿನ ಸಂದ್ರಿ ರಸ್ತೆಯ ಮೇಲೆ ಆರೋಪಿತರು ಸಮಾನ ಉದ್ದೇಶದಿಂದ ಬಂದು ನ್ಯಾಯಾಲಯದಲ್ಲಿ ಡಿಕ್ರಿ ದಾವೆಯನ್ನು ಮಾಡಿದ್ದೀಯಾ ಎಂದು ಚಾಸಾ-1 ರವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಮತ್ತು ಕಲ್ಲುಗಳಿಂದ ಹಲ್ಲೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ 3 ನೇ ಆರೋಪಿಯು ಕೈಯಿಂದ ಹೊಡೆದು ಕಾಲಿನಿಂದ ಒದ್ದು ಗಾಯಪಡಿಸಿ ಪ್ರಾಣ ಬೆದರಿಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-5 ಮತ್ತು 6 ರವರು ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ.

2. ಈ ಕುರಿತು ಚಾಸಾ-1 ರವರು ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ರವರಿಂದ ಚಾಸಾ1 ರವರಿಗೆ ಹಲ್ಲೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಾನು ದಿಃ 18.12.2014 ರಂದು ಈ ಘಟನೆಯ ಕುರಿತು ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ನನಗೆ ನಿಪಿ-4 ರಲ್ಲಿ ಬರೆದಿರುವ ಅಂಶಗಳು ಗೊತ್ತಿದ್ದರೂ ಕೂಡಾ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ವ ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**